
PARAHITAM
FOUNDATION®

ಪರಹಿತಮ್ ಫೌಂಡೇಷನ್‌ನ ಸಮಾಚಾರ ಪತ್ರಿಕೆ

# ವಿಹಿತಮ್


• ಸಂಪುಟ ೨

• ಜನವರಿ-ಫೆಬ್ರವರಿ ೨೦೨೩ ಸಂಚಿಕೆ

# ಹೊಸವರ್ಷಕ್ಕೆ ಹೊಸಬೆಳಕು

ಸಾಮಾನ್ಯವಾಗಿ ಮಾನಸಿಕ ಅರೋಗ್ಯದಲ್ಲಿ ಸಮಸ್ಯೆ ಎದುರಿಸುತ್ತಿರುವವರಿಗೆ ಒತ್ತಡ, ಆತಂಕ ಮತ್ತು ಸಂಕೀರ್ಣ ಭಾವನೆಗಳು ಕಾಡುತ್ತವೆ. ಆಗ ಪ್ರೀತಿ ಹಂಚುವ, ಭರವಸೆ ತುಂಬುವ ಮತ್ತು ಸ್ಫೂರ್ತಿ ನೀಡುವ ಒಂದು ಮಾತು ಅವರಲ್ಲಿ ಧೈರ್ಯ ಮೂಡಿಸಬಹುದು.



ನಮ್ಮ ಸುತ್ತಲಿನ ಜನರ ಮಾನಸಿಕ ಆರೋಗ್ಯದ ಬಗ್ಗೆ ನಾವು ಕಾಳಜಿ ವಹಿಸುವಲ್ಲಿ ಅನೇಕ ಬಾರಿ ನಿರ್ಲಕ್ಷ್ಯ ಮಾಡುವ ಸಾಧ್ಯತೆಯಿರುತ್ತದೆ. ಆದರೆ ಅದೊಂದು ಮುಖ್ಯವಾದ ಸಂಗತಿಯೇ ಹೌದು. ಇಂತಹ ಕಾರ್ಯಕ್ರಮಗಳ ಮೂಲಕ ಜಾಗೃತಿ ಉಂಟಾಗಲಿ ಎಂಬುದು ನಮ್ಮ ಸದಾಶಯ.








ಇಂತಹ ಸಂದೇಶಗಳುಳ್ಳ ಗ್ರೀಟಿಂಗ್ ಕಾರ್ಡ್ಸ್‌ಗಳನ್ನು ಹಂಚುವ ಮೂಲಕ 2023ರನ್ನು ಸ್ವಾಗತಿಸಲು ನಿರ್ಧರಿಸಿದೆವು. ವಿಜಯನಗರದ ತಿಂಡಿಬೀದಿಯಲ್ಲಿ ನಿಂತು ಸಾರ್ವಜನಿಕರಿಗೆ ಅವುಗಳನ್ನು ಉಚಿತವಾಗಿ ಹಂಚಿದೆವು. ಖ್ಯಾತ ವೀಣಾವಾದಕರಾದ ಶ್ರೀ ಮಹೇಶ್ ಪ್ರಸಾದ್‌ರವರ ಅನಿರೀಕ್ಷಿತ ಭೇಟಿ ನೀಡಿ ನಮ್ಮ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸುವ ಮೂಲಕ ನಮ್ಮನ್ನು ಹಾರೈಸಿದರು.




# ಮೊಳೆ ಹೊಡೆಯಬೇಡಿ, ಮರವ ನೋಯಿಸಬೇಡಿ

**ಜಾ**ಹಿರಾತುಗಳನ್ನು ಹಾಕಲು ಮರಗಳಿಗೆ ಮೊಳೆಗಳನ್ನು ಹೊಡೆಯುವುದನ್ನು ನೋಡಿದರೆ ಬಹಳ ಬೇಸರವಾಗುತ್ತದೆ. ಭಾರತದಲ್ಲಿ ಮೊದಲನಿಂದಲೂ ಮರಗಳನ್ನು ಪೂಜ್ಯಭಾವನೆಯಿಂದ ನೋಡಲಾಗಿದೆ ಮತ್ತು ಸುಮಾರು ೧೨೦ ವರ್ಷಗಳ ಹಿಂದೆ ಜಗದೀಶ್ ಚಂದ್ರ ಬೋಸ್ ಎಂಬ ವಿಜ್ಞಾನಿಯು ಇತರ ಜೀವಿಗಳಂತೆ ಮರಗಳಿಗೂ ಜೀವವಿದೆ, ಅವುಗಳಿಗೂ ನೋವಾಗುತ್ತದೆ ಎಂದು ಹೇಳಿದ್ದಾರೆ.









ಆದ್ದರಿಂದ ಪರಹಿತಮ್ ಫೌಂಡೇಶನ್ ವತಿಯಿಂದ ವಿಜಯನಗರದಲ್ಲಿ ಮರಗಳಿಗೆ ಹೊಡೆದ ಮೊಳೆಗಳನ್ನು ತೆಗೆಯುವ ಕಾರ್ಯಕ್ರಮವನ್ನು ಆಯೋಜಿಸಿದ್ದೆವು. ಈ ಕಾರ್ಯಕ್ರಮದಲ್ಲಿ ಬಹಳಷ್ಟು ಜನರು ಪಾಲ್ಗೊಂಡು ನಮ್ಮ ಕಾರ್ಯಕ್ರಮವನ್ನು ಯಶಸ್ವಿಯಾಗಿಸಿದರು.



# ಪಠ್ಯ ಚೀಲ ವಿತರಣೆ




ಮಕ್ಕಳನ್ನು ಕಲಿಕೆಗೆ ಪ್ರೋತ್ಸಾಹಿಸಲು ಪರಹಿತಮ್ ಫೌಂಡೇಶನ್ ವತಿಯಿಂದ ಆಶ್ರಮದ ಸುಮಾರು ೧೮ ಮಕ್ಕಳಿಗೆ ಪಠ್ಯ ಚೀಲಗಳನ್ನು ವಿತರಿಸಿದೆವು. ಎಲ್ಲ ಮಕ್ಕಳು ಬಹಳ ಸಂತೋಷದಿಂದ ಪಠ್ಯ ಚೀಲಗಳನ್ನು ಸ್ವೀಕರಿಸಿದರು. ಹೀಗೊಂದು ಬೇಡಿಕೆ ನಮಗೆ ಬಂದಾಗ ನಾವು ಸಾಮಾಜಿಕ ಜಾಲತಾಣಗಳಲ್ಲಿ ಈ ಬಗ್ಗೆ ಮಾಹಿತಿ ಪಸರಿಸಿದೆವು. ಅದನ್ನು ಕಂಡು ಸಾರ್ವಜನಿಕರು ಸಹಾಯ ಮಾಡಲು ಮುಂದಾದರು. ಅವರೆಲ್ಲರ ಬೆಂಬಲ ಹಾಗೂ ಸಹಕಾರದೊಂದಿಗೆ ಮಕ್ಕಳ ಮುಖದಲ್ಲಿ ನಗು ಮೂಡಿಸಲು ಸಾಧ್ಯವಾಯಿತು.

ಈ ಚಟುವಟಿಕೆ ಯಶಸ್ವಿಯಾಗಲು ಕಾರಣರಾದ ಎಲ್ಲರಿಗೂ ನಮ್ಮ ಧನ್ಯವಾದ.












# ಕಲಿ - ನಲಿ

ಪಾಠ ಎನ್ನುವುದು ಮಕ್ಕಳಿಗೆ ಹೊರೆ ಆಗಬಾರದು ಎಂಬ ಉದ್ದೇಶ ನಮ್ಮದು. ಹಾಗಾಗಿ ಮಕ್ಕಳು ಪಾಠವನ್ನು ಖುಷಿಯಿಂದ ಆಟದ ಜತೆ ಕಲಿಸಲು ಹೊಸ ಪ್ರಯತ್ನಗಳನ್ನು ಪರಹಿತಮ್ ಮಾಡುತ್ತಿದೆ. ಇದರ ಅಂಗವಾಗಿ ಸತ್ಯ ಸಾಯಿ ಆಶ್ರಮದಲ್ಲಿರುವ ಮಕ್ಕಳಿಗೆ ವಿವಿಧ ಚಟುವಟಿಕೆಗಳ ಮೂಲಕ ಆಂಗ್ಲ ಭಾಷೆಯನ್ನು ಹೇಳಿಕೊಡಲಾಯಿತು.





# ವಿದ್ಯಾಹಿತಮ್

ಜನವರಿ ತಿಂಗಳಿನಲ್ಲಿ, ಪರಹಿತಮ್ ಫೌಂಡೇಷನ್ನಿನ 'ವಿದ್ಯಾಹಿತಮ್' ಯೋಜನೆಯಡಿ ಮೈಸೂರಿನ ವಿದ್ಯಾರ್ಥಿಯೊಬ್ಬನಿಗೆ 10 ಸಾವಿರ ರೂಪಾಯಿಗಳನ್ನು ನೀಡುವ ಮೂಲಕ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದೆವು.

**ಏನಿದು ವಿದ್ಯಾಹಿತಮ್?**

ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಉತ್ತಮ ಶಿಕ್ಷಣ ದೊರಕಬೇಕು ಎಂಬ ಯೋಚನೆಯಿಂದ ನಾವು ರೂಪಿಸಿದ ಯೋಜನೆ 'ವಿದ್ಯಾಹಿತಮ್'.

ಅಗತ್ಯವಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಹಣದ ರೂಪದಲ್ಲಿ ಸಹಾಯ ಮಾಡಿ, ಅವರ ವಿದ್ಯಾಭ್ಯಾಸದ ಖರ್ಚನ್ನು ಪರಹಿತಮ್ ಫೌಂಡೇಷನ್ ನೋಡಿಕೊಳ್ಳುತ್ತದೆ. ಅಂದರೆ, ಆ ವಿದ್ಯಾರ್ಥಿ/ವಿದ್ಯಾರ್ಥಿನಿಯ ಶಿಕ್ಷಣದ ಜವಾಬ್ದಾರಿ ನಮ್ಮದಾಗಿರುತ್ತದೆ.

ಅನೇಕ ವಿದ್ಯಾರ್ಥಿಗಳಿಗೆ ಹಣದ ಅಗತ್ಯವಿದೆ. ನಾವೆಲ್ಲರೂ ಸೇರಿ ಸಮಾಜಕ್ಕಾಗಿ ಕೆಲಸ ಮಾಡಿದಾಗ ಈ ರೀತಿಯ ಅನೇಕ ಸಹಾಯಗಳನ್ನು ಮಾಡಬಹುದು. ಮಕ್ಕಳಿಗೆ ಉತ್ತಮ ಶಿಕ್ಷಣ ದೊರಕಿಸಲು ಕೆಲಸ ಮಾಡಬಹುದು. ಈ ಕಾರ್ಯಕ್ಕೆ ನೀವು ಕೂಡ ಕೈಜೋಡಿಸಬಹುದು. ನಿಮ್ಮಿಂದ ಆಗುವ ಸಹಾಯವನ್ನು ಮಾಡಬಹುದು, ಪ್ರತಿ ತಿಂಗಳು ನಿಮ್ಮಿಂದ ಸಾಧ್ಯವಾಗುವ ಸಹಾಯವನ್ನು ಮಾಡಬಹುದು. ನೀವು ನಮ್ಮೊಂದಿಗೆ ಕೈಜೋಡಿಸಬೇಕು ಎಂದುಕೊಂಡಿದ್ದರೆ ಕೆಳಗಿನ ಸಂಖ್ಯೆಯನ್ನು ಸಂಪರ್ಕಿಸಿ.

**ಸಂಪರ್ಕ ಸಂಖ್ಯೆ: 8088064074**

ನೀವು ನೀಡುವ ದೇಣಿಗೆಗೆ 80ಜಿ ವಿಭಾಗದ ಅಡಿಯಲ್ಲಿ ತೆರಿಗೆ ವಿನಾಯಿತಿ ಸೌಲಭ್ಯ ಕೂಡ ಲಭ್ಯವಿದೆ.

# ಹಂಚಿ ಬಾಳಿದರೆ ಪರಮಸುಖ

**ಪರಹಿತಮ್ ಫೌಂಡೇಷನ್‌ನ ಸ್ವಯಂಸೇವಕರ ಜನ್ಮದಿನವನ್ನು ಪ್ರತಿ ತಿಂಗಳ ಕೊನೆಯ ಭಾನುವಾರದಂದು ಅಗತ್ಯ ಇರುವವರಿಗೆ ಆಹಾರ ವಿತರಿಸುವ ಮೂಲಕ ಆಚರಿಸುವೆವು. ಇದರ ಅಂಗವಾಗಿ ಜನವರಿ ತಿಂಗಳಲ್ಲಿ ಸುಮಾರು ೫೦ ಅಂಧ ವಿದ್ಯಾರ್ಥಿಗಳಿಗೆ ಆಹಾರ ವಿತರಿಸಿದೆವು.**



# ದಂತ ಮಂಥನ

**ಮ**ಕ್ಕಳಲ್ಲಿ ಹಲ್ಲುಗಳ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು, ಪರಹಿತಮ್ ಫೌಂಡೇಶನ್ ವತಿಯಿಂದ ನಾವು ದಂತ ಮಂಥನ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡೆವು. ಈ ಕಾರ್ಯಕ್ರಮವನ್ನು ಬಾಲ್ಯ ಚಾರಿಟೇಬಲ್ ಟ್ರಸ್ಟ್‌ನ ವಿದ್ಯಾರ್ಥಿಗಳಿಗೆ ಜನವರಿ ೨೯ ರಂದು ಆಯೋಜಿಸಿದೆವು. Curaden India pvt ltd ನಲ್ಲಿ education consultant ಆಗಿ ಕಾರ್ಯ ನಿರ್ವಹಿಸುತ್ತಿರುವ ಡಾ. ಅಶ್ವಿನ್, BDS, MDS ಅಂದಿನ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.










ಈ ಕಾರ್ಯಕ್ರಮದಲ್ಲಿ ಡಾ ಅಶ್ವಿನ್ ಅವರು ಹಲ್ಲುಗಳ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹೇಗೆ ಎಂಬುದರ ಬಗ್ಗೆ ಹೇಳಿದರು ಮತ್ತು ಮಕ್ಕಳಲ್ಲಿ ಹಲ್ಲುಗಳ ಆರೋಗ್ಯದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಿದರು. ಮಕ್ಕಳ ಜತೆಗೆ ಸಣ್ಣ ಸಂವಾದ ಕಾರ್ಯಕ್ರಮವನ್ನು ಮಾಡಲಾಯಿತು. ಕಾರ್ಯಕ್ರಮದಲ್ಲಿ ಆಸಕ್ತಿಯಿಂದ ಭಾಗಿಯಾದ ಮಕ್ಕಳು ಕಾರ್ಯಕ್ರಮದ ಬಗ್ಗೆ ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಹಂಚಿಕೊಂಡರು ಹಾಗೂ ಸಂತೋಷಪಟ್ಟರು.

# ಮೇವು ಕೊಡುವ ಖುಷಿ

ಆಹಾರವಿಲ್ಲದ, ಆಶ್ರಯವಿಲ್ಲದ ಅನೇಕ ಪ್ರಾಣಿಗಳು ಅಪಾಯಕ್ಕೀಡಾಗುವುದರ ಬಗ್ಗೆ ನಾವು ಕೇಳುತ್ತೇವೆ. ಅಂತಹ ಪ್ರಾಣಿಗಳಿಗೆ ಆಹಾರ, ಆಶ್ರಯಗಳನ್ನು ನೀಡಿ ಅವುಗಳನ್ನು ಸಾಕುವುದು ಸುಲಭದ ಕೆಲಸವಲ್ಲ. ಅದಕ್ಕಾಗಿ ಬಹಳ ಶ್ರಮ, ಧನ ವ್ಯಯವಾಗುತ್ತದೆ.





ಚಲ್ಲಘಟ್ಟದ ಬಳಿ ನಿರಾಶ್ರಿತವಾಗಿದ್ದಂತಹ ಗೋವುಗಳನ್ನು, ಎಮ್ಮೆಗಳನ್ನು, ನಾಯಿಗಳನ್ನು, ಕುರಿಗಳನ್ನು ಮತ್ತು ಕೆಲವು ಪಕ್ಷಿಗಳನ್ನು ಶ್ರೀಮತಿ ಕಾವ್ಯ ಎನ್ನುವವರು ಪಾಲಿಸುತ್ತಿದ್ದಾರೆ. ಆ ಆಶ್ರಯ ಕೇಂದ್ರಕ್ಕೆ ನಮ್ಮ ತಂಡ ಭೇಟಿ ನೀಡಿತು.

ಅಲ್ಲಿ ಪುಟ್ಟ ಸೇವೆ ಸಲ್ಲಿಸುವ ಯೋಜನೆ ನಮ್ಮದಾಗಿತ್ತು. 15 ಕೆ.ಜಿ ಅಕ್ಕಿ, 60 ಬೆಲ್ಲದುಂಡೆಗಳು, ನಾಯಿಗೆ ಬೇಕಾದ 2 ಕೆ.ಜಿ ಆಹಾರಗಳನ್ನು ನೀಡಿದ ತೃಪ್ತಿ ನಮ್ಮದಾಯಿತು. ಕಸಾಯಿಖಾನೆಗೆ ಹೋಗುವುದರಿಂದ ರಕ್ಷಿತವಾಗಿದ್ದ ಕೆಲವು ಪ್ರಾಣಿಗಳೂ ಅಲ್ಲಿದ್ದವು. ಅವುಗಳೊಡನೆ ಬೆರೆತು, ಅವುಗಳ ಮೈಸವರುವ ಖುಷಿಯ ಕ್ಷಣಗಳು ನಮ್ಮದಾದವು.









# ವಿದ್ಯುನ್ಮಾನ ತ್ಯಾಜ್ಯ (ಈ-ವೇಸ್ಟ್) ಸಂಗ್ರಹ

ಬೆಂಗಳೂರಿನಲ್ಲಿ ಅತ್ಯಂತ ಗಣನೀಯ ಪ್ರಮಾಣದಲ್ಲಿ ಈ-ವೇಸ್ಟ್ ಉತ್ಪಾದನೆಯಾಗುತ್ತದೆ. ಗೃಹಗಳಲ್ಲಿ ಮತ್ತು ಸಾಫ್ಟ್‌ವೇರ್ ಸಂಸ್ಥೆಗಳಲ್ಲಿ ಉಂಟಾಗುವ ಈ-ವೇಸ್ಟ್‌ನಲ್ಲಿ ಕೇವಲ 17.4%ರಷ್ಟು ಮಾತ್ರ ಪುನರ್ಬಳಕೆಯಾಗುತ್ತಿದೆ. ಇವುಗಳು ಸರಿಯಾಗಿ ವಿಲೇವಾರಿಯಾಗದಿರುವುದು ಪ್ರಕೃತಿಗೆ ದೊಡ್ಡ ಸಮಸ್ಯೆ. ಈ ವಿಷಯದ ಬಗ್ಗೆ ಚಿಂತನೆ ನಡೆಸಿ ಪ್ರಕೃತಿಯೆಡೆಗಿನ ನಮ್ಮ ಕರ್ತವ್ಯವನ್ನು ನಾವು ಮಾಡಬೇಕಿದೆ.
















ಅದರ ಅಂಗವಾಗಿ ಯಶವಂತಪುರದಲ್ಲಿನ ಮೂರು ಅಪಾರ್ಟ್‌ಮೆಂಟ್‌ಗಳಲ್ಲಿ ಈ-ವೇಸ್ಟ್ ಸಂಗ್ರಹಿಸುವ ಅಭಿಯಾನವನ್ನು ಫೆ. 26ರಂದು ಆರಂಭಿಸಿದೆವು. ಬ್ಯಾನರ್‌ಗಳನ್ನು ಕಟ್ಟಿ, ತ್ಯಾಜ್ಯ ಸಂಗ್ರಹಕ್ಕಾಗಿ ಪೆಟ್ಟಿಗೆಯನ್ನು ಇಟ್ಟು, ಅಲ್ಲಿನ ನಿವಾಸಿಗಳಿಗೆ ಅವರ ಮನೆಯ ಈ-ವೇಸ್ಟ್ ಹಾಕಲು ಉತ್ತೇಜಿಸಿದೆವು.

ಸಂಗ್ರಹವಾಗುವ ಈ-ವೇಸ್ಟ್ ಅನ್ನು ಅಧಿಕೃತ ಎಸ್.ಪಿ.ಸಿ.ಬಿ ಪುನರ್ಬಳಕೆ ಮಾಡುವವರಿಗೆ ನೀಡಲಾಗುವುದು.

# ಎಸ್.ಡಿ.ಪಿ ದಾನಿಗಳ ಸಂಯೋಜನೆ

**ಪ್ಲೇಟ್‌ಲೆಟ್‌ಗಳು ನಮ್ಮ ರಕ್ತದ ಮುಖ್ಯ ಅಂಶ. ಗಾಯವಾದಾಗ ರಕ್ತಸೋರುವಿಕೆಯನ್ನು ತಡೆಗಟ್ಟುವಲ್ಲಿ ಇವುಗಳದ್ದು ಮುಖ್ಯಪಾತ್ರ. ಹ್ಯಾಮರೇಜ್, ತಾಲಾಸ್ಸೇಮಿಯಾ, ರಕ್ತ ಕ್ಯಾನ್ಸರ್ ಮುಂತಾದ ವ್ಯಾಧಿಗಳಿಗೆ ಚಿಕಿತ್ಸೆ ನೀಡುವಾಗ ಪ್ಲೇಟ್‌ಲೆಟ್‌ಗಳು ಅವಶ್ಯಕ.**

**ಇತ್ತೀಚೆಗೆ ಶಂಕರ ಕ್ಯಾನ್ಸರ್ ಫೌಂಡೇಶನ್‌ನಲ್ಲಿ ಎಸ್.ಡಿ.ಪಿ (ಸಿಂಗಲ್ ಡೋನರ್ ಪ್ಲೇಟ್‌ಲೆಟ್) ದಾನಿಗಳ ಅವಶ್ಯಕತೆಯಿತ್ತು. ಫೆ. 25ರಂದು ದಾನಿಯೊಬ್ಬರನ್ನು ಸಂಯೋಜಿಸುವುದರ ಮೂಲಕ ನಮ್ಮ ಸೇವೆ ಸಂದಿತು.**



**ಇಷ್ಟಪಡುವುದನ್ನು ಮಾಡುವುದರಲ್ಲಲ್ಲ,
ಮಾಡುವುದನ್ನು ಇಷ್ಟಪಡುವುದರಲ್ಲಿ
ನಿಜವಾದ ಖುಷಿಯಿದೆ.**

**- G. M. Barrie**

# ಇರುವ ಭಾಗ್ಯವ ನೆನೆದು, ಬಾರೆನೆಂಬುದನು ಬಿಡು

ಸುಖ-ಶಾಂತಿಗಳನ್ನು ಪಡೆಯುವುದು ಕಷ್ಟವೆಂದೇ ಅನಿಸುವುದು. ಆದರೆ ಅದಕ್ಕೊಂದು ಸುಲಭದ ದಾರಿಯಿದೆ.

ಒಮ್ಮೆ, ತರಗತಿಗೆ ಆಗಮಿಸಿದ ಶಿಕ್ಷಕರೊಬ್ಬರು ವಿದ್ಯಾರ್ಥಿಗಳಿಗೆ ದಿಢೀರ್ ಪರೀಕ್ಷೆಗೆ ಸಿದ್ಧರಾಗಲು ಸೂಚಿಸಿದರು. ವಿದ್ಯಾರ್ಥಿಗಳೆಲ್ಲ ಕೊಂಚ ಗಾಬರಿಯಿಂದ ಪರೀಕ್ಷೆ ಆರಂಭವಾಗಲು ಕಾದರು. ಎಂದಿನಂತೆ ಶಿಕ್ಷಕರು ಹಾಳೆಯನ್ನು ಹಿಂದು-ಮುಂದು ಮಾಡಿ, ಮುದ್ರಣವಾದ ಭಾಗ ಡೆಸ್ಕ್ ಕಡೆಗೆ ಮುಖ ಮಾಡುವಂತೆ ಪ್ರಶ್ನೆಪತ್ರಿಕೆಯನ್ನು ನೀಡಿದರು. ಎಲ್ಲರಿಗೂ ಪ್ರಶ್ನೆಪತ್ರಿಕೆ ಹಂಚಿದ ಮೇಲೆ, ಅದನ್ನು ತಿರುಗಿಸಿ ಉತ್ತರ ಬರೆಯಲು ಹೇಳಿದರು.

ಆದರೆ, ಎಲ್ಲ ವಿದ್ಯಾರ್ಥಿಗಳಿಗೂ ಆಶ್ಚರ್ಯ ಕಾದಿತ್ತು! ಆ ಹಾಳೆಯಲ್ಲಿ ಪ್ರಶ್ನೆಗಳೇ ಇರಲಿಲ್ಲ. ಬದಲಿಗೆ, ಹಾಳೆಯ ಮಧ್ಯದಲ್ಲಿ ಕೇವಲ ಒಂದು ಕಪ್ಪು ಚುಕ್ಕಿ ಮುದ್ರಿತವಾಗಿತ್ತು. ವಿದ್ಯಾರ್ಥಿಗಳ ಭಾವವನ್ನು ಗಮನಿಸಿದ ಶಿಕ್ಷಕರು ಇಂತೆಂದರು: "ನಿಮಗೆ ಅಲ್ಲಿ ಏನು ಕಾಣಿಸುತ್ತಿದೆಯೋ ಅದನ್ನು ಬರೆಯಿರಿ".

ವಿದ್ಯಾರ್ಥಿಗಳಿಗೆ ಏನು ಬರೆಯಬೇಕೆಂದು ಗೊಂದಲವಾಯಿತು. ತಮಗೆ ಏನು ಅನಿಸುತ್ತದೆಯೋ ಅದನ್ನು ಬರೆದರು. ಕೊನೆಯಲ್ಲಿ ಎಲ್ಲರ ಉತ್ತರಪತ್ರಿಕೆಯನ್ನು ಶಿಕ್ಷಕರು ನೋಡಿದರು. ಎಲ್ಲರ ಉತ್ತರಗಳನ್ನು ಜೋರಾಗಿ ಓದಿದರು. ಎಲ್ಲರ ಉತ್ತರವೂ ಒಂದೇ ಆಗಿತ್ತು - ಕಪ್ಪು ಚುಕ್ಕಿಯ ಬಗ್ಗೆ, ಅದು ಇರುವ ಜಾಗದ ಬಗ್ಗೆ ಎಲ್ಲರೂ ಬರೆದಿದ್ದರು.

ಎಲ್ಲ ಉತ್ತರಗಳನ್ನು ಓದಿದ ಮೇಲೆ, ತರಗತಿ ಮೌನವಾಗಿತ್ತು. ಆಗ ಶಿಕ್ಷಕರು ಹೇಳಿದರು: "ಈ ಪರೀಕ್ಷೆ ಅಂಕಗಳಿಗಾಗಿ ಅಲ್ಲ. ಆದರೆ ನಿಮಗೆಲ್ಲ ಒಂದು ವಿಷಯದ ಬಗ್ಗೆ ಯೋಚನೆ ಮಾಡಲು ಪ್ರೇರಣೆ ನೀಡಬೇಕಾಗಿತ್ತು. ನಿವೆಲ್ಲರೂ ಕಪ್ಪು ಚುಕ್ಕಿಯ ಬಗ್ಗೆ ಗಮನ ಹರಿಸಿದ್ದೀರಿ, ಅದರ ಬಗ್ಗೆ ಬರೆದಿದ್ದೀರಿ. ಆದರೆ ಹಾಳೆಯಲ್ಲಿನ ಬಿಳಿಯ ಭಾಗದ ಬಗ್ಗೆ ಯಾರೂ ಬರೆಯಲಿಲ್ಲ. ಬಿಳಿಯ ಭಾಗ ಅಷ್ಟು ದೊಡ್ಡದಿದ್ದರೂ, ಅದನ್ನು ನೋಡಿ ಖುಷಿಯನ್ನು ಪಡೆಯಬಹುದಾಗಿದ್ದರೂ, ನಮ್ಮ ದೃಷ್ಟಿ ಕೇವಲ ಕಪ್ಪು ಚುಕ್ಕಿಯ ಮೇಲೆ ಇರುತ್ತದೆ. ಬದುಕಿನ ಹಾಳೆಯಲ್ಲಿ ಬಿಳಿಯ ಭಾಗವೇ ದೊಡ್ಡದು, ಕಪ್ಪು ಚುಕ್ಕಿ ಸಣ್ಣದು. ಆದರೆ ಆ ಸಣ್ಣ ಚುಕ್ಕಿ ನಮ್ಮ ಬದುಕನ್ನೇ ಕೆಡಿಸುತ್ತದೆ."

ಇದೆಷ್ಟು ಸತ್ಯ ಅಲ್ಲವೇ. ಕೊರತೆಗಳ ಮೇಲೆ, ಕಷ್ಟಗಳ ಮೇಲೆ ನಮ್ಮ ಗಮನ ಹೋದಾಗ ಬದುಕು ಕುಗ್ಗುತ್ತದೆ. ಬದಲಿಗೆ, ನಮ್ಮಲ್ಲಿರುವ, ನಮ್ಮ ಸುತ್ತಲಿರುವ ಒಳಿತಿನೆಡೆಗೆ ತಿರುಗಿ ನೋಡಿದರೆ ಬದುಕು ಬೆಳಕಾಗುತ್ತದೆ. ಭಗವಂತ ಕಷ್ಟ ಕೊಟ್ಟ ಎಂದಷ್ಟೇ ಹೇಳದೆ, ದಾಟುವ ದಾರಿಯನ್ನೂ ಕೊಟ್ಟ ಎಂದು ಹೇಳುತ್ತೇವೆ. ಭಗವಂತನಿಗೆ ನಮ್ಮ ಮೇಲಿರುವ ಪ್ರೀತಿಯ ಅರಿವು ನಮಗಾಗುತ್ತದೆ.

ಜೀವಂತವಾಗಿರುವುದು, ಆರೋಗ್ಯವಾಗಿರುವುದು ಮತ್ತು ನೆಮ್ಮದಿಯಿಂದಿರುವುದು - ಇವುಗಳಿಗಿಂತ ದೊಡ್ಡ ಭಾಗ್ಯ ಮತ್ತೇನಿದೆ?

ಕಗ್ಗದ ಕವಿ ಹೇಳಿರುವಂತೆ:
ಬರದಿಹುದರೆಣಿಕೆಯಲಿ ಬಂದಿಹುದ ಮರೆಯದಿರು ।
ಗುರುತಿಸೊಳಿತಿರುವುದನು ಕೇಡುಗಳ ನಡುವೆ ॥
ಇರುವ ಭಾಗ್ಯವ ನೆನೆದು ಬಾರೆನೆಂಬುದನು ಬಿಡು ।
ಹರುಷಕದೆ ದಾರಿಯೆಲೊ - ಮಂಕುತಿಮ್ಮ ||

ಇರುವ ಭಾಗ್ಯವನ್ನು ನೆನೆಯೋಣ. ಇಲ್ಲದಿರುವುದನ್ನು, ಬರದಿರುವುದನ್ನು ಬಿಟ್ಟುಬಿಡೋಣ. ಇದೇ ಸುಖ-ಶಾಂತಿಗಳಿಗೆ ದಾರಿ.


- ಐಶ್ವರ್ಯ ಬಿ. ಎಸ್



# ಡಾ| ರಾಮಸ್ವಾಮಿ ಬಾಲಸುಬ್ರಹ್ಮಣ್ಯಂ

ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್(SVYM)ನ ಸಂಸ್ಥಾಪಕರು ಹಾಗೂ ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್ (GRAAM) ಸ್ಥಾಪಕರಾದ ಡಾ| ರಾಮಸ್ವಾಮಿ ಬಾಲಸುಬ್ರಮಣ್ಯಂ ಅವರು ಅಭಿವೃದ್ಧಿ ಕಾರ್ಯಗಳಲ್ಲಿ ಹೆಸರುವಾಸಿಯಾದವರು. ಇವರು ವಿದ್ವಾಂಸರು, ಲೇಖಕರು, ಸಾರ್ವಜನಿಕ ನೀತಿ ವಕೀಲರು, ನಾಯಕತ್ವ ತರಬೇತುದಾರ ಮತ್ತು ಕಾರ್ಯಕರ್ತರಾಗಿ ತಮ್ಮನ್ನು ತಾವು ಸಮಾಜಕ್ಕೆ ಅರ್ಪಿಸಿಕೊಂಡವರು. ಹಾಗೂ ಮೈಸೂರು ವೈದ್ಯಕೀಯ ಕಾಲೇಜಿನಿಂದ MBBS, ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಆಸ್ಪತ್ರೆ ಮತ್ತು ಆರೋಗ್ಯ ವ್ಯವಸ್ಥೆಗಳ ನಿರ್ವಹಣೆಯಲ್ಲಿ ಎಂಫಿಲ್ ಮತ್ತು ಜಾನ್ ಎಫ್. ಕೆನಡಿ ಸ್ಕೂಲ್ ಆಫ್ ಗವರ್ನಮೆಂಟ್ , ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ತಮ್ಮ ಶಿಕ್ಷಣವನ್ನು ಪೂರೈಸಿರುತ್ತಾರೆ.

ಡಾ| ಬಾಲು ಅವರು ತಮ್ಮ 19 ನೇ ವಯಸ್ಸಿನಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ ತಾಲೂಕಿನ ಸರಗೂರು-ಕೆಂಚನಹಳ್ಳಿಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್(SVYM) ಎಂಬ ಅಭಿವೃದ್ಧಿ ಸಂಸ್ಥೆಯನ್ನು, ಸಹೃದಯ ವೈದ್ಯ ಗೆಳೆಯರೊಂದಿಗೆ ಆದಿವಾಸಿ ಮತ್ತು ಬುಡಕಟ್ಟು ಜನಾಂಗದವರಿಗಾಗಿ ಈ ಸಂಸ್ಥೆಯನ್ನು ಸ್ಥಾಪಿಸಿ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಸ್ಥಾನಮಾನವನ್ನು ಕಾಪಾಡುವಲ್ಲಿ ಅಭ್ಯುದಯ ಕಾರ್ಯಕರ್ತರಾಗಿದ್ದಾರೆ. ಡಾ| ರಾಮಸ್ವಾಮಿ ಬಾಲಸುಬ್ರಹ್ಮಣ್ಯಂ ಅವರು ಸಾಂಸ್ಥಿಕ ಅಭಿವೃದ್ಧಿ ಮತ್ತು ಸಾರ್ವಜನಿಕ ನೀತಿಯಲ್ಲಿ ಶೈಕ್ಷಣಿಕ ಪದವಿಗಳನ್ನು ಪಡೆದರು. ಅವರು 2012 ರಿಂದ 2014ರ ನಡುವೆ ಕಾರ್ನೆಲ್ ವಿಶ್ವವಿದ್ಯಾನಿಲಯದಲ್ಲಿ ಫ್ರಾಂಕ್ ಎಚ್‌ಟಿ ರೋಡ್ಸ್ ಪ್ರಾಧ್ಯಾಪಕರಾಗಿಯೂ, ಕಾರ್ನೆಲ್ ಮತ್ತು ಇತರ ವಿಶ್ವವಿದ್ಯಾಲಯಗಳಲ್ಲಿ ಶೈಕ್ಷಣಿಕ ಸ್ಥಾನಗಳಲ್ಲಿಯೂ ಕಾರ್ಯ ನಿರ್ವಹಿಸಿದ್ದಾರೆ.

’ಸಾಮಾಜಿಕ ಉದ್ಯಮಶೀಲತೆಯ ತತ್ತ್ವಶಾಸ್ತ್ರದೊಂದಿಗೆ ಬುಡಕಟ್ಟು ಮಹಿಳೆಯರ ಸಬಲೀಕರಣ’ ಎಂಬ ಮಾದರಿ ಕೆಲಸವನ್ನು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಆರಂಭಿಸಿದೆ. ಈ ಉಪಕ್ರಮಕ್ಕೆ GRAAM ಸಹಭಾಗಿತ್ವವಿದ್ದು ಈವರೆಗೆ ಅನೇಕ ಕಾರ್ಯಗಳನ್ನು ಬುಡಕಟ್ಟು ಜನಾಂಗದ ಹಿತಾಸಕ್ತಿಯಲ್ಲಿ ನಡೆಸಿದೆ. ಆಹಾರ ತಂತ್ರಜ್ಞಾನ, ರಾಗಿ ಆಧಾರಿತ ಪದಾರ್ಥಗಳ ಉತ್ಪಾದನೆ ಸೇರಿದಂತೆ ಅನೇಕ ವಿಷಯಗಳ ಕುರಿತಾಗಿ ಬುಡಕಟ್ಟು ಮಹಿಳೆಯರಿಗೆ ತರಬೇತಿ ನೀಡಲಾಗುತ್ತಿದೆ. ಈ ಮೂಲಕ ಬುಡಕಟ್ಟು ಜನಾಂಗದ ಮಹಿಳೆಯರನ್ನು ಉದ್ಯಮಿಗಳಾಗಿ ಬೆಳೆಸಲಾಗುತ್ತಿದೆ. ಯಾವುದೇ ಔಪಚಾರಿಕ ಶಿಕ್ಷಣ ಇಲ್ಲದ ಹಾಗೂ ಉತ್ತಮ ಆರ್ಥಿಕ ಸ್ಥಿತಿ ಹೊಂದಿರದ ಬುಡಕಟ್ಟು ಮಹಿಳೆಯರಿಗೆ ಇದರಿಂದ ಅನುಕೂಲವಾಗುವಂತೆ ಸಹಾಯ ಮಾಡಲಾಗುತ್ತಿದೆ. ಇಂತಹ ತರಬೇತಿ ಘಟಕಗಳನ್ನು ಬೆಂಗಳೂರಿನ ಹೊರವಲಯವಾದ ಒರೊಹಳ್ಳಿ ಹಾಗೂ ಎಚ್.ಡಿ ಕೋಟೆ ಬಳಿಯ ಹುಣಸೆಕುಪ್ಪೆ ಹಾಡಿಯಲ್ಲಿ ಸ್ಥಾಪಿಸಲಾಗಿದೆ.

ಅವರ 'ವಾಯ್ಸ್ ಫ್ರಮ್ ದಿ ಗ್ರಾಸ್‌ರೂಟ್ಸ್' ಮತ್ತು 'ಐ, ದಿ ಸಿಟಿಜನ್' ಎಂಬ ಪುಸ್ತಕಗಳು ಅವರ ನಿರೂಪಣೆಗಳ ಮತ್ತು ಅಲೋಚನೆಗಳ ಸಂಕಲನವಾಗಿದ್ದು ಈಗ ಜಾಗತಿಕವಾಗಿ ಮೆಚ್ಚುಗೆ ಪಡೆದಿವೆ. ಸ್ವಾಮಿ ವಿವೇಕಾನಂದರ ಸಂದೇಶದಿಂದ ಪ್ರೇರಿತರಾದ ಇವರು ದೇಶದ ಯುವಜನರಲ್ಲಿ ನಾಯಕತ್ವವನ್ನು ಪ್ರೇರೇಪಿಸುವ ಮೂಲಕ ಭಾರತವನ್ನು ಪುನರುತ್ಥಾನಗೊಳಿಸುವ ತಮ್ಮ ಜೀವನದ ಧ್ಯೇಯವನ್ನು ನೋಡುತ್ತಿದ್ದಾರೆ.

ಪ್ರಸ್ತುತ ಭಾರತ ಸರ್ಕಾರದಲ್ಲಿ ಡಾ| ಬಾಲು ಅವರು ಸಾಮರ್ಥ್ಯ ನಿರ್ಮಾಣ ಆಯೋಗದ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ತ್ಯಾಗ ಮತ್ತು ಸೇವೆಗಳ ಉತ್ತಮ ಉದಾಹರಣೆಯಾದ ಡಾ| ರಾಮಸ್ವಾಮಿ ಬಾಲಸುಬ್ರಹ್ಮಣ್ಯಂ ಅವರ ಜೀವನವು, ಯುವಕರಿಗೆ ತಮ್ಮ ನಿಜ ಶಕ್ತಿಯನ್ನು ಜಾಗೃತಗೊಳಿಸಿಕೊಳ್ಳಲು ಮತ್ತು ಅದನ್ನು ಭಾರತಾಂಬೆಯ ಸೇವೆಗೆ ಸಮರ್ಪಿಸಲು ದಾರಿದೀಪವಾಗಿದೆ.



- ಅಕ್ಷತಾ ಹೆಬ್ಬಾರ್

## ಕನ್ನಡ ವಿಹಿತಮ್ ತಂಡ:

ವಿನ್ಯಾಸ: ರಕ್ಷಿತ್ ಅಡಿಗ

ಸಂಪಾದಕರು:

೧. ವೈಷ್ಣವೀ ಕುಲಕರ್ಣಿ

೨. ಗಣೇಶ ಹೆಗಡೆ

ನೆರವು:

ಪ್ರಮೋದ ಹೆಗಡೆ

# ನಮ್ಮನ್ನು ಸಂಪರ್ಕಿಸಿ

+91 8088064074

@parahitam_foundation

Parahitam Foundation

parahitam.foundation@gmail.com

www.parahitam.org/